ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1411 (1774)
ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 14.03.2022
ಉತ್ತರಿಸುವವರು : ಅರಣ್ಯ, ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಗ್ರಾಮೀಣ ರಸ್ತೆಗಳ ಅಭಿವೃದ್ಧಿ, ರಸ್ತೆಗಳ ಅಗಲೀಕರಣ ಸೇರಿದಂತೆ ಇತರೆ ಸರ್ಕಾರಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ನಡೆಸುವ ಸಂಬಂಧ ವಿವಿಧ ಇಲಾಖೆಗಳಿಗೆ ಮರಗಳ ತೆರವಿಗಾಗಿ ಅರಣ್ಯ ಇಲಾಖೆ ವಿಧಿಸುವ ಮೊತ್ತ ಎಷ್ಟು; ಈ ಸಂಬಂಧ ಕಳೆದ 2 ವರ್ಷಗಳಿಂದ ಈವರೆಗೂ ಜಮಾ ಆಗಿರುವ ಹಣ ಎಷ್ಟು;</td><td>ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ರಸ್ತೆಗಳ ಅಗಲೀಕರಣಕ್ಕೆ ಮರಗಳನ್ನು ತೆರವುಗೊಳಿಸಬೇಕಾದ ಸಂದರ್ಭ ಬಂದಾಗ ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ:ಅಪಜೀ 168 ಎಫ್‌ಡಿಪಿ 2017 ದಿನಾಂಕ:06.12.2018 ಮತ್ತು ಪರಿಷ್ಕೃತ ಆದೇಶ ದಿನಾಂಕ:08.10.2020ರನ್ವಯ ಪ್ರತಿ ಮರದ ಕಡಿತಲೆ ಬದಲಾಗಿ 1:10ರ ಅನುಪಾತದಲ್ಲಿ ಪ್ರತಿ ಗಿಡನೆಟ್ಟು ಪೋಷಿಸುವ ಠೇವಣಿ ಮೊತ್ತ ರೂ.373.01 ಗಳನ್ನು ಹಾಗೂ ಪ್ರತಿ ಕಿ.ಮೀಗೆ ರೂ. 3.00 ಲಕ್ಷಗಳಂತೆ ಉಪಯೋಗಿ ಸಂಸ್ಥೆಯವರಿಂದ ಪರಿಹಾರಾತ್ಮಕ ನೆಡುತೋಪು ಮೊತ್ತವನ್ನು ಸಂಗ್ರಹಿಸಲಾಗುತ್ತಿದೆ.

ಈ ಸಂಬಂಧ ಕಳೆದ 2 ವರ್ಷಗಳಿಂದ ಈ ವರೆಗೆ ಜಮೆಯಾಗಿರುವ ಮೊತ್ತ ಈ ಕೆಳಗಿನಂತಿದೆ.

<table><tr><th>ವರ್ಷ</th><th>ಕಳೆದ ಎರಡು ವರ್ಷಗಳಿಂದ ಈ ವರೆಗೂ ಜಮಾ ಮಾಡಿರುವ ಮೊತ್ತ (ರೂ. ಲಕ್ಷಗಳಲ್ಲಿ)</th></tr><tr><td>2019-20</td><td>2,406.32</td></tr><tr><td>2020-21</td><td>2,440.43</td></tr></table>
ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ರಸ್ತೆಗಳ ಅಗಲೀಕರಣ ಕಾಮಗಾರಿಗಳು ಮುಗಿದ ನಂತರ ರಸ್ತೆ ಬದಿಯಲ್ಲಿ ಮರಗಳನ್ನು ಬೆಳೆಸಲು ಯಾವ ಕ್ರಮ ಕೈಗೊಳ್ಳಲಾಗಿದೆ; ಈವರೆಗೂ ಎಷ್ಟು ಮರ ಬೆಳೆಸಲಾಗಿದೆ; ಇದಕ್ಕೆ ವಿನಿಯೋಗಿಸಿರುವ ಮೊತ್ತ ಎಷ್ಟು? (ಶಿವಮೊಗ್ಗ ಜಿಲ್ಲೆಯ ಸಂಪೂರ್ಣ ಮಾಹಿತಿ ನೀಡುವುದು)</td><td>2018-19ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 42.99 ಕಿ.ಮೀ. ವಿಸ್ತೀರ್ಣದಲ್ಲಿ 8,598 ಸಸಿಗಳನ್ನು ನೆಟ್ಟಿದ್ದು ರೂ. 41.533 ಲಕ್ಷಗಳನ್ನು ವಿನಿಯೋಗಿಸಲಾಗಿರುತ್ತದೆ. ರಸ್ತೆ ಅಗಲೀಕರಣ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ರಸ್ತೆ ಬದಿಯ ಮರಗಳನ್ನು ಬೆಳೆಸಲು ಮುಂದಿನ ಹಂತದಲ್ಲಿ ಕ್ರಮ ಕೈಗೊಳ್ಳಲಾಗುವುದು.</td></tr>
</table>

ಸಂಖ್ಯೆ: ಅಪಜೀ 15 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ-1

ಕ್ರ.ಸಂ	ವೃತ್ತಗಳು	ಕಳೆದ 2 ವರ್ಷಗಳಿಂದ ಈವರೆಗೂ ಜಮಾಮಾಡಿರುವ ಮೊತ್ತ		ಒಟ್ಟು ಮೊತ್ತ (ರೂ ಲಕ್ಷಗಳಲ್ಲಿ)
		2019-20	2020-21	
1	ಬೆಂಗಳೂರು	361.1	1273.22	1634.32
2	ಬೆಳಗಾವಿ	66.18	96.23	162.42
3	ಬಳ್ಳಾರಿ	52.18	29.45	81.63
4	ಚಾಮರಾಜನಗರ	0.30	0.30	0.30
5	ಚಿಕ್ಕಮಗಳೂರು	363.55	185.36	548.91
6	ಧಾರವಾಡ	186.78	61.40	248.19
7	ಹಾಸನ	837.93	323.78	1161.72
8	ಕಲಬುರಗಿ	32.86	15.46	48.32
9	ಕೆನಾರ	11.08	94.58	105.66
10	ಕೊಡಗು	0	0	0
11	ಮಂಗಳೂರು	52.07	140.455	192.525
12	ಮೈಸೂರು	640.29	79.993	720.28
13	ಶಿವಮೊಗ್ಗ	0	140.21	140.21
ಒಟ್ಟು		**2604.32**	**2440.438**	**5044.485**